# ಕೀಟಲೋಕದ ಕೀಚಕರು!







ಅದೊಂದು ದಿನ ನೀಲಿ ಬಣ್ಣದ ಎರಡು ದುಂಬಿಗಳು ಒಂದಾಗಿರುವುದು ಕಾಣಿಸಿತು. ನೋಡಿದರೆ ಅವುಗಳ ಮೇಲೆ ಮೂರನೆಯ ಮತ್ತೊಂದು ದುಂಬಿ ದಾಳಿ ನಡೆಸುತ್ತಿತ್ತು!

★ ಚಿತ್ರ- ಬರಹ:
ಗಣಪತಿ ಬಾಳೆಗದ್ದೆ

ಲೈಂಗಿಕ ದೌರ್ಜನ್ಯ ಈಗ ದಿನನಿತ್ಯದ ಸುದ್ದಿ. ಕೀಟಲೋಕದಲ್ಲೂ ಇಂತಹ ಕೀಚಕರಿದ್ದಾರೆಂದು ಕೇಳಿದ್ದೆ. ಇತ್ತೀಚೆಗೆ ಆಕಸ್ಮಿಕವಾಗಿ ನೋಡುವ ಅವಕಾಶವೂ ಸಿಕ್ಕಿತು.

ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿರುವ ಒಂದು ಕಾಡು ಬಳ್ಳಿಯಲ್ಲಿ ಒಂದಿಷ್ಟು ಕೀಟಗಳು ಕಾಣಿಸಿಕೊಂಡವು. ಅವು ದುಂಬಿಗಳ ಜಾತಿಗೆ ಸೇರಿದ್ದು, ತಮ್ಮ ಚೆಲುವಿನಿಂದ ಕಣ್ಮನ ಸೆಳೆಯುತ್ತಿದ್ದವು.

ಅವುಗಳ ಬಹುಪಾಲು ಸಮಯ ಆ ಬಳ್ಳಿಯ ಎಲೆಗಳನ್ನು ತಿನ್ನುವುದರಲ್ಲೇ ಕಳೆಯುತ್ತಿತ್ತು. ಹಾಗೆ ತಿನ್ನುವಾಗ ನನ್ನ ಬರುವಿಕೆ ಗೊತ್ತಾದರೆ ಅಲ್ಲಿಂದ ಹಾರಿಬಿಡುತ್ತಿದ್ದವು. ತುಂಬ ಪುಕ್ಕಲು ಜೀವಿಗಳು. ಮನುಷ್ಯರ ಇರುವಿಕೆಯನ್ನು ಸಹಿಸುತ್ತಿರಲಿಲ್ಲ. ಆದರೂ ನಾನು ದೂರದಲ್ಲಿಯೇ ನಿಂತು ಅವುಗಳನ್ನು ಗಮನಿಸುತ್ತಿದ್ದೆ. ಆಗಾಗ ಅವುಗಳ ಹತ್ತಿರ ಹೋಗಿ ಫೋಟೋ ಕ್ಲಿಕ್ಕಿಸುತ್ತಿದ್ದೆ. ಅವು ಗಾತ್ರದಲ್ಲಿ ಒಂದೇ ಥರ ಇದ್ದರೂ ಬಣ್ಣದಲ್ಲಿ ಬೇರೆ ಬೇರೆ ಇದ್ದವು. ಹಸಿರು, ನೀಲಿ, ಕೆಂಚು, ಕಪ್ಪು ಮುಂತಾದ ವರ್ಣಗಳಲ್ಲಿ ಕಾಣಿಸುತ್ತಿದ್ದವು.

ಒಂದು ಕುತೂಹಲದ ಸಂಗತಿಯೆಂದರೆ, ಅವು ಒಂದೇ ಬಳ್ಳಿಯಲ್ಲಿದ್ದೂ ಎಲ್ಲವೂ ಒಟ್ಟಿಗೇ ಇರುತ್ತಿರಲಿಲ್ಲ. ಸದಾ ಸ್ವಲ್ಪ ದೂರದ ಅಂತರವನ್ನು ಕಾಯ್ದುಕೊಳ್ಳುತ್ತಿದ್ದವು. ಗಂಡು ಹೆಣ್ಣುಗಳು ಆಗಾಗ ಮಿಲನದಾಟದಲ್ಲಿ ತೊಡಗಿಕೊಳ್ಳುತ್ತಿದ್ದವು.

ಅದೊಂದು ದಿನ ನೀಲಿ ಬಣ್ಣದ ಎರಡು ದುಂಬಿಗಳು ಒಂದಾಗಿರುವುದು ಕಾಣಿಸಿತು. ನೋಡಿದರೆ ಅವುಗಳ ಮೇಲೆ ಮೂರನೆಯ ಮತ್ತೊಂದು ದುಂಬಿ ದಾಳಿ ನಡೆಸುತ್ತಿತ್ತು!

ಮಿಲನ ನಡೆಸಿದ್ದ ಗಂಡು ದುಂಬಿಯನ್ನು ಹೆಣ್ಣಿನಿಂದ ಬೇರ್ಪಡಿಸುವ ಪ್ರಯತ್ನವನ್ನು ಈ ಮೂರನೆಯ ಕೀಟ ನಡೆಸುತ್ತಿತ್ತು! ಆದರೆ ಆ ಗಂಡು ಗಟ್ಟಿಪಿಂಡವೇ ಇರಬೇಕು. ಎದುರಾಳಿಯ ದಾಳಿಯ ನಡುವೆಯೂ ಸುಮಾರು ಒಂದು ತಾಸು ಸುರತ ನಡೆಸಿತು! ಕೀಟಗಳಲ್ಲಿ ಅತ್ಯಾಚಾರ ನಡೆಯುತ್ತದೆಯೋ ಇಲ್ಲವೋ ಎನ್ನುವುದು ಗೊತ್ತಾಗಲಿಲ್ಲ; ಆದರೆ ಹೆಣ್ಣಿಗಾಗಿ ಹೋರಾಟ ನಡೆಸುವುದಂತೂ ಅರ್ಥವಾಗಿತ್ತು!

ಈ ದುಂಬಿಗಳನ್ನು ಇಂಗ್ಲೀಷಿನಲ್ಲಿ **dogbane leaf beatle** ಎಂದು ಕರೆಯುತ್ತಾರೆ. ಕನ್ನಡದಲ್ಲಿ ಎಲೆ ದುಂಬಿ, ನೀಲಿ ದುಂಬಿ, ಹಸಿರು ದುಂಬಿ ಎಂಬೆಲ್ಲ ಹೆಸರುಗಳಿವೆ. ಇವು ತಮ್ಮ ಮೇಲೆ ಬೀಳುವ ಬೆಳಕಿಗೆ ಅಕ್ಕ ಪಕ್ಕದ ಪ್ರಕೃತಿಯ ಬಣ್ಣಗಳನ್ನು ಪ್ರತಿ ಫಲಿಸುವುದರಿಂದ ಹೆಚ್ಚು ರಂಗು ರಂಗಾಗಿ ಕಾಣಿಸುತ್ತವೆ! ಇವು ಹಾಲು ಒಸರುವ ಒಂದು ಜಾತಿಯ [ಕೂಗಲು ಬಳ್ಳಿ] ಬಳ್ಳಿಗಳ ಎಲೆಗಳನ್ನು ತಿನ್ನುತ್ತವೆ. ತಾವು ತಿನ್ನುವ ಅಂತಹ ಎಲೆಗಳ ತಳ ಭಾಗದಲ್ಲಿ ಮೊಟ್ಟೆ ಇರಿಸಿ ವಂಶಾಭಿವೃದ್ಧಿ ಮಾಡುತ್ತವೆ.